## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆ: 740/2024

**ಸಾಕ್ಷಿಯನ್ನು ದಿಃ 16.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ದೀಪಿಕ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 9 |
| ಗಂಡನ ಹೆಸರು | ಗಣೇಶ್ | | |
| ವಯಸ್ಸು | 28 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಬೀಜಗನಹಳ್ಳಿ | | |

### <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾ-1 ನನಗೆ ಅತ್ತಿಗೆಯಾಗಬೇಕು. ನನಗೆ ಚಾಸಾ-2 ರಿಂದ 4 ಮತ್ತು 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ದಿಃ 26.01.2023 ರಂದು ಸಂಜೆ ಸುಮಾರು 7 ರಿಂದ 7-30 ಗಂಟೆಗೆ ನಾನು ಮತ್ತು ಚಾಸಾ-1 ರವರು ಇಬ್ಬರೇ ಮನೆಯಲ್ಲಿದ್ದೆವು. ಆಗ 1ನೇ ಆರೋಪಿ ಮನೆಯ ಬಳಿ ಬಂದು ಗಲಾಟೆ ಮಾಡಿದರು. 1ನೇ ಆರೋಪಿ ಚಾಸಾ-1 ರವರಿಗೆ ಕೆಟ್ಟದಾಗಿ ಬೈದರು. ಕೈಗಳಿಂದ ಚಾಸಾ-1 ರವರ ಕೈಕಾಲಿಗೆ ಹೊಡೆದರು. 1ನೇ ಆರೋಪಿ ಚಾಸಾ-1 ರವರ ಕೆನ್ನೆಗೆ ಹೊಡೆದರು. ನಮ್ಮ ಮನೆಯಲ್ಲಿ ನಮ್ಮ ಸಂಬಂಧಿಯಾದ ಚಾಸಾ-6 ರವರು ಇದ್ದರು. ನಾನು ಮತ್ತು ಚಾಸಾ-6 ರವರು ಜಗಳ ಬಿಡಿಸಿದೆವು. 2023 ನವೆಂಬರ್ ನಲ್ಲಿ ಚಾಸಾ-1 ಮತ್ತು ಮಕ್ಕಳು 1ನೇ ಆರೋಪಿಯ ಮನೆಗೆ ಹೋದರು. ಅಲ್ಲಿ ಆರೋಪಿತರೆಲ್ಲಾ ಸೇರಿ ವರದಕ್ಷಿಣೆ ತಂದಿಲ್ಲ, ನಿನ್ನ ತಂದೆ ತಾಯಿಯನ್ನು ಕರೆದುಕೊಂಡು ಬಾ ಎಂದು ಚಾಸಾ-1 ರವರ ಜೊತೆ ಗಲಾಟೆ ಮಾಡಿದರು. ಈ ವಿಷಯವನ್ನು ಚಾಸಾ-1 ರವರು ನನಗೆ ಹೇಳಿದರು. ನನ್ನ ಮದದುವೆಗೂ ಮೊದಲಿನಿಂದ ಚಾಸಾ-1 ರವರು ನಮ್ಮ ಮನೆಯಲ್ಲಿಯೇ ಇದ್ದರು. ಯಾಕೆ ಎಂದು ಕೇಳಿದಾಗ 1ನೇ ಆರೋಪಿಗೆ ಬೇರೆ ಮಹಿಳೆಯೊಂದಿಗೆ ಸಂಬಂಧ ಇದ್ದು ಆ ಕಾರಣದಿಂದ ಇರುವುದಾಗಿ ಹೇಳಿದ್ದರು. ಚಾಸಾ-1 ರವರು ಆರೋಪಿತರ ವಿರುದ್ಧ ಮಹಿಳಾ ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದರು. ಅದಕ್ಕೆ ಆರೋಪಿತರು ಸರಿಯಾಗಿ ಸ್ಪಂದಿಸಿರಲಿಲ್ಲ. ಪುನಃ

10 ದಿನ ಬಿಟ್ಟು ಚಾಸ-1 ರವರು ಮೈಸೂರು ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟರು. ನಾನು ಪೋಲೀಸರ ಮುಂದೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಆರೋಪಿತರು ಚಾಸಾ-1 ರವರಿಗೆ ನಮ್ಮ ವಿರುದ್ಧ ಪೋಲೀಸ್ ಠಾಣೆಗೆ ದೂರು ನೀಡಿರುತ್ತಿಯಾ ಎಂದು, ನಿನ್ನನ್ನು ಮನೆಗೆ ಸೇರಿಸುವುದಿಲ್ಲ ಎಂದು ಗಲಾಟೆ ಮಾಡಿ ಚಾಸಾ.1 ರವರಿಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. JSA ಪರ ಶ್ರೀ. BMR ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.